# ಕಲಾ ನಿರ್ದೇಶಕನ ಪಾತ್ರ ದೊಡ್ಡದು



## ಹೊಸಮನೆ ಮೂರ್ತಿ

### ಗುರು ರಾಘವೇಂದ್ರ ವೈಭವದ ಕಲಾ ನಿರ್ದೇಶಕ

ಈ ವಾರ ನಮ್ಮೊಂದಿಗೆ

**★ *ಟಿವಿ ಧಾರಾವಾಹಿಗಳಲ್ಲಿ ಕಲಾ ನಿರ್ದೇಶಕನ ಅಗತ್ಯ ಇದೆಯಾ?***
ಇದೆ. ಸಾಮಾಜಿಕ ಧಾರಾವಾಹಿಗಳಲ್ಲಿ ಕೆಲಸ ಸ್ವಲ್ಪ ಕಡಿಮೆ. ಆದರೆ ಪೌರಾಣಿಕ, ಐತಿಹಾಸಿಕ ಧಾರಾವಾಹಿ ಹಾಗೂ ರಿಯಾಲಿಟಿ ಶೋಗಳಲ್ಲಿ ಕಲಾ ನಿರ್ದೇಶಕನ ಪಾತ್ರ ದೊಡ್ಡದಿದೆ. ಕಲ್ಪನೆ, ಸೃಜನಶೀಲತೆಗೆ ಅಲ್ಲಿ ಹೆಚ್ಚಿನ ಕೆಲಸ ಇದೆ.

**★ *ನಿರ್ದೇಶಕರು ಕಲಾ ನಿರ್ದೇಶಕನಿಗೆ ತಕ್ಕುದಾದ ಸ್ಥಾನ ನೀಡಿ ಅವರನ್ನು ಸರಿಯಾಗಿ ಬಳಸಿಕೊಳ್ತಾರೆಯೇ?***
ವಾಸ್ತವತೆಯನ್ನು ಕಲಾತ್ಮಕವಾಗಿ ಮಾಡಬೇಕೆನ್ನುವ ಸೂಕ್ಷ್ಮ ಮನೋಭಾವದ ನಿರ್ದೇಶಕರು ಆರ್ಟ್ ಡೈರೆಕ್ಟರ್‌ಅನ್ನು ಸರಿಯಾಗಿಯೇ ಬಳಸಿಕೊಳ್ತಾರೆ. ರಾಘವೇಂದ್ರ ವೈಭವದ ನಿರ್ದೇಶಕ ಬಿ.ಎಲ್.ಸುರೇಶ್ ನನಗೆ ಹೆಚ್ಚಿನ ಸ್ವಾತಂತ್ರ್ಯ ಕೊಟ್ಟು ಕೆಲಸ ತೆಗೆಸಿಕೊಂಡಿದ್ದಾರೆ. ಪ್ರತಿ ಫ್ರೇಮ್‌ನಲ್ಲೂ ನಾನು ಹಾಕಿದ ಸೆಟ್ ಇದೆ. ಹಾಗಾಗಿ ಖುಷಿಯಾಗಿದೆ.

**★ *'ಗುರು ರಾಘವೇಂದ್ರ ವೈಭವ' ಧಾರಾವಾಹಿಯ ಆಕರ್ಷಣೆಗೆ ಅದರ ಹಿನ್ನೆಲೆ, ಸೆಟ್ಸ್ ಕೂಡ ಕಾರಣವಾಗಿದೆ. 300-400 ವರ್ಷಗಳ ಹಿಂದಿನ ವಸ್ತು, ಪರಿಕರ- ಎಲ್ಲವನ್ನೂ ಹೇಗೆ ಹೊಂದಿಸಿಕೊಂಡಿರಿ?***
ನಿರ್ಮಾಪಕ ಪಟ್ಟಾಭಿರಾಮ್‌ರ ಎಂ.ಎಸ್.ರಾಮಯ್ಯ ಕುಟುಂಬದ ಛತ್ರಗಳು, ತೋಟವನ್ನು ಬಳಸಿಕೊಂಡೆವು. ಅರಮನೆಯನ್ನು ಈ ಧಾರಾವಾಹಿಗಾಗಿ ನಿರ್ಮಿಸಿ ಸ್ವಲ್ಪ ಫ್ಯಾನ್ಸಿ ಮಾಡಿಕೊಂಡೆವು. 300 ವರ್ಷಕ್ಕೂ ಹಿಂದಿನ ಪಾತ್ರೆಪದಾರ್ಥ ಬೇಕಿತ್ತು. ದೀಪ, ಪಾತ್ರೆ, ಕುಡಿಕೆ, ಬಿಂದಿಗೆ ಮುಂತಾದವು ಶಿವಮೊಗ್ಗ ಜಿಲ್ಲೆಯ ಭೀಮನಕಟ್ಟೆ ರಾಯರ ಮಠದಲ್ಲಿ ದೊರೆತವು. ಆ ಕಾಲದ ಪೇಂಟಿಂಗ್ ಹಾಗೂ ಚರಿತ್ರೆ ಆಧರಿಸಿ ದೊಡ್ಡ ಪೆಟಾರಿಗಳನ್ನು ನಿರ್ಮಿಸಿಕೊಂಡೆ. ಮಧುರೆ, ಕುಂಭಕೋಣಂ ಮಠಗಳ ಪೇಂಟಿಂಗ್ ನೋಡಿ ಅದರಂತೆಯೇ ರಾಮಯ್ಯನವರ ಸಾಮ್ರಾಜ್ಯದಲ್ಲಿ ಎಲ್ಲವನ್ನೂ ವಿನ್ಯಾಸ ಮಾಡಿದೆವು. ಧಾರಾವಾಹಿ ಆರಂಭದ ಮೊದಲ ಮೂರು ತಿಂಗಳು ಇದಕ್ಕಾಗಿ ಸಿದ್ಧತೆ ಮಾಡಿಕೊಂಡೆವು. ಹಂಪಿ, ಶ್ರೀರಂಗಪಟ್ಟಣ, ನಂಜನಗೂಡಿನ ವಾತಾವರಣವನ್ನು ಧಾರ್ಮಿಕ ಹಿನ್ನೆಲೆಯಾಗಿ ಬಳಸಿಕೊಳ್ಳಲಾಗಿದೆ.

**★ *ಅದ್ದೂರಿ ಹಾಗೂ ರಿಯಲಿಸ್ಟಿಕ್ ಸೆಟ್ ಮಾಡುವ ಈ ಹುಚ್ಚು ಹತ್ತಿದ್ದು ನಿಮಗೆ ಹೇಗೆ?***
ನಮ್ಮ ಊರ ಕಡೆ ತೆಲುಗು ಸಿನಿಮಾ, ಅದರಲ್ಲೂ ಪೌರಾಣಿಕ ಹೆಚ್ಚಾಗಿ ಬರುತ್ತಿದ್ದವು. ಅವುಗಳಲ್ಲಿನ ಅದ್ದೂರಿ ಸೆಟ್ಸ್ ನೋಡಿ ನನಗೂ ಹಾಗೆ ಸೆಟ್ ಹಾಕಬೇಕು ಎಂದು ಬಾಲ್ಯದಿಂದಲೇ ಅನಿಸುತ್ತಿತ್ತು.

**★ *ತೆಲುಗು ಚಿತ್ರಗಳೇ ಪ್ರಧಾನವಾದ ಆ ನಿಮ್ಮ ಊರು, ಹಿನ್ನೆಲೆ ಏನು?***
ಗೌರಿಬಿದನೂರು ತಾಲ್ಲೂಕು ಹೊಸೂರು ನಮ್ಮೂರು. ತಾಯಿ ವಿಜಯಲಕ್ಷ್ಮಿ, ತಂದೆ ಶೇಷಗಿರಿ ರಾವ್ ಬೆಂಗಳೂರಿನ ಮೈಕೊದಲ್ಲಿ ಕೆಲಸದಲ್ಲಿದ್ದರೂ, ಹಳ್ಳಿಯಿಂದ ಓಡಾಡಿಕೊಂಡಿದ್ದರು. ಹಾಗಾಗಿ ನಾವು ಹಳ್ಳಿಯಲ್ಲೇ ಬೆಳೆದೆವು. ಪಿಯುಸಿವರೆಗೂ ಗೌರಿಬಿದನೂರಿನಲ್ಲಿ ಓದಿದೆ. ಮೊದಲಿನಿಂದಲೂ ಸಿನಿಮಾದ ಗೀಳಿತ್ತು. ನಟನಾಗಬೇಕೆಂದುಕೊಂಡಿದ್ದೆ. ಅದಕ್ಕಿಂತ ಹೆಚ್ಚಿನ ಗೀಳು ಪರಿಕರ, ರಂಗಸಜ್ಜಿಕೆ ಮೇಲಿತ್ತು. ಈ ನನ್ನ ಆಸಕ್ತಿಯ ಫಲವಾಗಿ ಬೆಂಗಳೂರಿನ ಚಿತ್ರಕಲಾ ಪರಿಷತ್‌ನ ಪೇಂಟಿಂಗ್ ಕೋರ್ಸ್ ಸೇರಿ ಐದು ವರ್ಷದ ಪದವಿ ಮುಗಿಸಿಕೊಂಡು, ನಂತರ ಒಂದು ವರ್ಷ ಅಭಿನಯ ತರಂಗದಲ್ಲಿ ನಟನೆ ನಿರ್ದೇಶನದಲ್ಲಿ ತರಬೇತಿ ಪಡೆದೆ.

**★ *ಕಿರುತೆರೆ, ಹಿರಿತೆರೆಗಳ ಕಲಾ ನಿರ್ದೇಶಕನಾದದ್ದು ಹೇಗೆ?***
'ಮುಕ್ತ ಮುಕ್ತ'ದ ನಿರ್ದೇಶಕ ಟಿ.ಎನ್.ಸೀತಾರಾಮ್ ಗೌರಿಬಿದನೂರಿನವರು. ಕಿರುತೆರೆಯಲ್ಲಿ ಸೆಟ್ಸ್ ಮಾಡುವ ಆಸೆಯನ್ನು ಅವರ ಬಳಿ ವ್ಯಕ್ತಪಡಿಸಿದೆ. 'ಕಾಲೇಜು ತರಂಗ' ಧಾರಾವಾಹಿಯಲ್ಲಿ ಅವಕಾಶ ಕಲ್ಪಿಸಿದರು. ನಂತರ ರಾಮದಾಸ ನಾಯ್ಡು ಧಾರಾವಾಹಿಗಳು ಹಾಗೂ ಅವರ 'ಪ್ರೇರಣಾ' ತೆಲುಗು ಚಿತ್ರದಲ್ಲಿ ಕಲಾ ನಿರ್ದೇಶನ ಮಾಡಿದೆ. ಕಾವೇರಿ ಚಾನೆಲ್‌ನಲ್ಲಿ ಹೆಚ್ಚಿನ ಧಾರಾವಾಹಿಗಳಿಗೆ ಕಲಾ ನಿರ್ದೇಶನ ಮಾಡಿದೆ. ಎನ್.ಎಸ್.ಶಂಕರ್ ಅವರ 'ಉಲ್ಟಾ ಪಲ್ಟಾ' ನಾನು ಕಲಾ ನಿರ್ದೇಶನ ಮಾಡಿದ ಮೊದಲ ಕನ್ನಡ ಚಿತ್ರ.

**★ *ನೀವು ಹಾಕಿಕೊಟ್ಟ ಸೆಟ್ ಬದಲಿಸಿಬಿಟ್ಟರೆ ಬೇಜಾರಾಗುತ್ತಾ?***
ಕಮರ್ಷಿಯಲ್ ಸಿನಿಮಾದಲ್ಲಿ ಒಮ್ಮೊಮ್ಮೆ ಹಾಗಾಗುತ್ತೆ. ಆಗ ಬೇಜಾರಾಗುತ್ತೆ. ಆದರೆ ವೃತ್ತಿಪರ ಸಿನಿಮಾ ಹಾಗೂ ಟಿವಿಯಲ್ಲಿ ಹಾಗಾಗುವುದಿಲ್ಲ.

■ ನಾಗು